ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.

ಪಾಟೀ ಸವಾಲುಃ 14 ನೇ ವಾದಿ ಪರವಾಗಿ ಶ್ರೀ ಅರ ಎ ಪಿ ವಕೀಲರಿಂದ ಃ

ನಮ್ಮ ಮನೆಯ ಮೂಲ ಪುರಷ ಅಬ್ದುಲ ರಹೀಮ್. ಅಬ್ದುಲ ರಹೀಮನ ಹೆಂಡತಿ ನೂರಜಹಾನ . ಅವರಿಗೆ ಅಬ್ದುಲ ರಜಾಕ ಮತ್ತು ರಿರಾಜ ಅಹಮದ ಅಂತಾ ಇಬ್ಬರು ಮಕ್ಕಳು ಅಂದರೆ ಸರಿ . ವಾದಿ ನಂ 1 ಸಲೀಮಾ ಮತ್ತು ವಾದಿ ನಂ 2 ರಿಂದ 7 ಇವರು ಸಿರಾಜ ಅಹಮದ ರವರ ಹೆಂಡತಿ ಮತ್ತು ಮಕ್ಕಳು ಅಂದರೆ ಸರಿ . ಅಬ್ದುಲ ರಜಾಕ ರವರ ಹೆಂಡತಿ ನೂರಜಹಾನ ಅಂದರೆ ಸರಿ . ಸದರಿ ರವರಿಗೆ ಪ್ರತಿವಾದಿ ನಂ 1 ಹೆಂಡತಿ , ಪ್ರತಿವಾದಿ ನಂ2 ರಿಂದ 4 ರವರು ಮಕ್ಕಳು ಅಂದರೆ ಸರಿ . ಕಿತ್ತೂರ ಮತ್ತು ಧಾರವಾಡದಲ್ಲಿ ಅವರ ಮನೆತನದ ಆಸ್ತಿಗಳು ಇದ್ದವೂ ಅಂದರೆ ಸರಿ . ಕಿತ್ತೂರ ಮತ್ತು ಧಾರವಾಡದಲ್ಲಿ ಮೂಲ ಪುರುಷನು ಇದ್ದ ಆಸ್ತಿಗಳಿಗೆ ಅವರ ಮಕ್ಕಳ ಹೆಸರು ದಾಖಲು ಆಗಿದೆ ಅಂದರೆ ಅಬ್ದುಲ ರಜಾಕ ಮತ್ತು ಸಿರಾಜ ಅಹಮದ ರವರ ಹೆಸರು ದಾಖಲಾಯಿತು ಅಂದರೆ ಸರಿಯಲ್ಲ. ನಮ್ಮ ಮನೆತದ ಆಸ್ತಿಯಲ್ಲಿ ನನ್ನ ತಂದೆ ಸಿರಾಜ ಅಹಮದ ಧಾರವಾಡದ ಮನೆಯಲ್ಲಿ ವಾಸವಾಗಿದ್ದರು ಅಂದರೆ ಸರಿ . ಅವರ ಸಹೋದರ ರಜಾಕ ಕಿತ್ತೂರದಲ್ಲಿ ಇದ್ದರು ಅಂದರೆ ಸರಿ . ನನ್ನ ಜನನ ದಿನಾಂಕ 07-03-1976 ಇರುತ್ತದೆ . 05-11-1976 ರಲ್ಲಿ ನನ್ನ ತಂದೆ ಮತ್ತು ನನ್ನ ಕಾಕಾ ಅಬ್ದುಲ ರಜಾಕ ನಡುವೆ ಕುಟುಂಬ ವ್ಯವಸ್ಥೆ ಆಗಿತ್ತು ಅಂದರೆ ಸರಿಯಲ್ಲ.

ಸದರಿ ಕುಟುಂಬ ವ್ಯವಸ್ಥೆ ಪ್ರಕಾರ ಸರ್ವೇ ನಂ 207/1+2 ಮತ್ತು ಗ್ರಾಮ ಪಂಚಾಯತ ನಂಬರ 370 ಎ , 307 ಬಿ , 469 ಎ , 469 ಬಿ , 131/2 ಆಸ್ತಿಗಳು ನೋಂದಾದ ಹಕ್ಕು ಪತ್ರ ಮುಖಾಂತರ ಅಬ್ದುಲ ರಜಾಕಗೆ ಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ದಾರವಾಡ ಪಟ್ಟದಲ್ಲಿ ಇರುವ ಮನೆ ಆಸ್ತಿಯನ್ನು ನನ್ನ ತಂದೆಗೆ ಹಿಸೆಗೆ ನೀಡಲಾಗಿತ್ತು ಅಂದರೆ ಸರಿಯಲ್ಲ. 05-11-1986 ರ ಕುಟುಂಬ ವ್ಯವಸ್ಥಾ ಪತ್ರವೂ ಸಬ ರಜಿಸ್ಟರ ಕಚೇರಿಯಲ್ಲಿ ನೋಂದಾಗಿದೆ ಅಂದರೆ ಸರಿಯಲ್ಲ. 05-11-1986 ರ ನೋಂದಾದ ಕುಟುಂಬ ವ್ಯವಸ್ಥಾ ಪತ್ರದ ಪ್ರಕಾರ ನನ್ನ ತಂದೆ ಮತ್ತು ಕಾಕಾ ಆಸ್ತಿ ಹಂಚಿಕೊಂಡಿದ್ದರೂ ಸಹ , ಆ ರೀತಿ ಕುಟುಂಬ ವ್ಯವಸ್ಥೆ ಪತ್ರ ಆಗಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಬ್ಬುಲ ರಜಾಕ ಮತ್ತು ನನ್ನ ತಂದೆ ದಾವಾದ ಆಸ್ತಿಯನ್ನು ಜಿ.ಪಿ ನಂ.235 ಮತ್ತು 236 ನ್ನು ಜಂಟಿ ಆಗಿ ಕಬಜಾ ಹೊಂದಿದ್ದರು ಅಂದರೆ ಸರಿಯಲ್ಲ . 1988 ನೇ ಇಸವಿಯಲ್ಲಿ ಜಿ ಪಿ ನಂ 235 ಮತ್ತು 236 ನ್ನು ನನ್ನ ತಂದೆ ಮತ್ತು ಅಬ್ಬುಲ ರಜಾಕದ ಹೆಸರು ಜಂಟಿ ಆಗಿ ನಮೂದು ಆಗಿತ್ತು ಅಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿ , ಅದರ ಪ್ರಕಾರ 1971- 72 ರಿಂದ 1982-88 ರವರೆಗೆ ಜಿ ಪಿ ನಂ 235 ಆಸ್ತಿಗೆ ಅಬ್ದುಲ ರಜಾಕ ಮತ್ತು ಸಿರಾಜ ಅಹಮಂದ ಜಂಟಿ ಆಗಿದ ಹೆಸರು ಇದೆ ಅಂದರೆ ಒಪ್ಪಿ ಕೂಳ್ಳುತ್ತಾರೆ . ಜಿ ಪಿ ನಂ 236 ಕ್ಕೆ ಸಂಬಂದಿಸಿದಂತೆ 1981 ರಿಂದ 1988 ರವರೆಗೆ ಅಬ್ದುಲ ರಜಾಕ ಮತ್ತು ಸಿರಾಜ ಅಹಮದ ಜಂಟಿ ಆಗಿ ಹೆಸರು ದಾಖಲಾಗಿದೆ ಅಂದರೆ ಸರಿ . 05-11-1986 ರಲ್ಲಿ ಮಾಡಿಕೊಂಡ ನೋಂದಾದ ಕುಟುಂಬ ವ್ಯವಸ್ಥೆ

ಪ್ರಕಾರ ಜಿ ಪಿ ನಂ 235 ಮತ್ತು 236 ಆಸ್ತಿಯನ್ನು ಸೇರಿಸಿರಲಿಲ್ಲ ಅಂದರೆ ಸರಿ . 1988 ನೇ ಇಸವಿಯಲ್ಲಿ ನನ್ನ ತಂದೆ ಮತ್ತು ಅಬ್ದುಲ ರಜಾಕ ರವರಿಗೆ ಹಣಕಾಸೀನ ತೊಂದರೆ ಉಂಟಾಗಿತ್ತು ಅಂದರೆ ಸರಿಯಲ್ಲ . ನನ್ನ ತಂದೆಗೆ ಮತ್ತು ನನ್ನ ಕಾಕಾ ರವರಿಗೆ ಹಣಕಾಸೀನ ತೊಂದರೆ ಇದ್ದರೂ ಸಹ ಈಗ ಇಲ್ಲ ಅಂತಾ ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ. 1988 ರಲ್ಲಿ ಹಣಕಾಸೀನ ತೂಂದರೆ ಇದ್ದ ಕಾರಣ , ಜಿ ಪಿ ನಂ 235 ಮತ್ತು 236 ಮಾರಾಟಕ್ಕೆ ಹಚ್ಚಿದ್ದರೂ ಅಂದರೆ ಸರಿಯಲ್ಲ. ಆ ಸಮಯದಲ್ಲಿ 13 ನೇ ಪ್ರತಿವಾದಿ ಮತ್ತು 14 ನೇ ಪ್ರತಿವಾದಿ ವಿಷ್ಣು ರವರು ನನ್ನ ತಂದೆ ಮತ್ತು ಕಾಕಾ ರವರ ಮುಖಾಂತರ 01-09-1988 ರಂದು ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ. 01-09-1988 ಕ್ಕೆ ನನ್ನ ತಂದೆ ಮತ್ತು ಕಾಕಾ ರವರು 13 ಮತ್ತು 14 ನೇ ಪ್ರತಿವಾದಿ ಹೆಸರಿಗೆ ಖರೀದಿ ಪತ್ರವನ್ನು ಬರೆಯಿಸಿ ನೋಂದ ಮಾಡಿದ್ದಾರೆ ಅಂದರೆ ಸರಿಯಲ್ಲ . ಸದರಿ ಖರೀದಿ ಪತ್ರದ ಪ್ರಕಾರ ಜಿ ಪಿ ನಂ 235 ಮತ್ತು 236 ನ್ನು 13 ನೇ ಪ್ರತಿವಾದಿ ದಕ್ಷಿಣ ದಿಕ್ಕಿನ ವಿಸ್ತಿರ್ಣ ಬಾಗವನ್ನು ಪೂರ್ವ - ಪಶ್ಚಿಮ 148 ಮತ್ತು ಉತ್ತರ – ದಕ್ಷಿಣ 24.6 ಅಡಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ . ಪೂರ್ವಕ್ಕೆ ಚೆಕ ಬಂದಿ ಹೆಬ್ಬಳ್ಳಿ ರವರ ಹಿತ್ತಲು ಪಶ್ಚಿಮಕ್ಕೆ ಸರಕಾರಿ ರಸ್ತೆ , ದಕ್ಷಿಣಕ್ಕೆ ಸುರೇಶ ರವರ ಹ್ತಿತ್ತಲು ಉತ್ತರಕ್ಕೆ 14 ನೇ ಪ್ರತಿವಾದಿ ಖರೀದಿಸಿದ ಆಸ್ತಿ ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಗೆ ಈಗ ಮೂಲ ಖರೀದಿ ಪತ್ರ ತೋರಿಸಿ , ಸದರಿ ಖರೀದಿ ಪತ್ರದ ಪ್ರಕಾರ ಅವರ ತಂದೆ ಮತ್ತು ಕಾಕಾ ,13 ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿದ ಖರೀದಿ ಪತ್ರ ಅಂತಾ ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಅದರಲ್ಲಿ ತನ್ನ ತಂದೆ ಹೆಸರು ಇರುವುದಿಲ್ಲ ಅಂತಾ ಹೇಳುತ್ತಾರೆ .

ಮೂಲ ಖರೀದಿ ಪತ್ರದಲ್ಲಿ ನನ್ನ ತಂದೆ ಸಹಿ ಮಾಡಿದ್ದರೂ ಸಹ ಆಸ್ತಿ ಕಬಳಿಸುವ ಸಲುವಾಗಿ ನನ್ನ ತಂದೆ ಸಹಿ ಇಲ್ಲ ಅಂತಾ ಸುಳ್ಳು ಹೇಳುತ್ತಿದೇನೆ ಅಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕೆ ಎ ಎಂ ಲಂಗೂಟಿ ಮತ್ತು ಕಸಾಯಿ ರವರ ಸಾಕ್ಷಿ ಅಂತಾ ಸಹಿ ಮಾಡಿದ್ದಾರೆ ಅಂರದೆ ಸರಿಯಲ್ಲ.
ಖರೀದಿ ಪತ್ರದ ಪ್ರಕಾರ ಜಿ ಪಿ ನಂ 235 ಮತ್ತು 236 ನ್ನು 14 ನೇ ಪ್ರತಿವಾದಿ ಉತ್ತರದ ದಿಕ್ಕಿನ ಬಾಗವನ್ನು ವಿಸ್ತೀರ್ಣ ಪೂರ್ವ - ಪಶ್ಚಿಮ 148 ಮತ್ತು ಉತ್ತರ – ದಕ್ಷಿಣ 24.6 ಅಡಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ. ಪೂರ್ವಕ್ಕೆ ಚಿಕ ಬಂದಿ ಹೆಬ್ಬಳ್ಳಿ ರವರ ಹಿತ್ತಲು ಪಶ್ಚಿಮಕ್ಕೆ ಸರಕಾರಿ ರಸ್ತೆ , ದಕ್ಷಿಣಕ್ಕೆ ಸುರೇಶ ರವರ ಹಿತ್ತಲು ಉತ್ತರಕ್ಕೆ 13 ನೇ ಪ್ರತಿವಾದಿ ಖರೀದಿಸಿದ ಆಸ್ತಿ ಇರುತದೆ ಅಂದರೆ ಸರಿಯಲ್ಲ.

2. 13 ಮತ್ತು 14 ನೇ ಪ್ರತಿವಾದಿ ರವರು ದಿಃ 01-09-1988 ರಲ್ಲಿ ಖರೀದಿ ಮಾಡಿದ ನಂತರ ಗ್ರಾಮ ಪಂಚಾಯತಿಗೆ ತಮ್ಮ ಹೆಸರು ಹಚ್ಚುವಂತೆ ದಿಃ 30-09-1988 ರಂದು ಅರ್ಜಿ ಕೊಟ್ಟಿದ್ದರೂ ಅಂದರೆ ಸರಿಯಲ್ಲ . ಗ್ರಾಮ ಪಂಚಾಯತ ಕಿತ್ತೂರ ರವರು ಜಿ ಪಿ ನಂ 235 ಮತ್ತು 236 ಗೆ ಠರಾವೂ ಸಂಖ್ಯೆ 6 ರಂತೆ 13 ಮತ್ತು 14 ನೇ ಪ್ರತಿವಾದಿ ರವರ ಹೆಸರು ದಾಖಲಿಸುವಂತೆ ಠರಾವ ಮಾಡಿದ್ದರು ಅಂದರೆ ಸರಿಯಲ್ಲ. 13 ಮತ್ತು 14 ನೇ ಪ್ರತಿವಾದಿ ರವರು ಖರೀದಿ ಮಾಡಿದಾಗಿನಿಂದ ಜಿ ಪಿ ನಂ 235 ಮತ್ತು 236 ಕ್ಕೆ ಪ್ರತ್ಯಕ್ಷ ಕಬಜಾ ಇದ್ದು , ವಹಿವಾಟು ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. 1988 ರಲ್ಲಿ ಠರಾವ ಅನ್ವಯ

13 ಮತ್ತು 14 ನೇ ಪ್ರತಿವಾದಿಯರ ಹೆಸರು ಪಂಚಾಯತಿ ಉತಾರೆಗಳಲ್ಲಿ ದಾಖಲಾಗಿದೆ ಅಂದರೆ ಸರಿಯಲ್ಲ . 13 ಮತ್ತು 14 ನೇ ಪ್ರತಿವಾದಿ ತಮ್ಮಲ್ಲಿ ವಾಟ್ನಿ ಮಾಡಿಕೂಂಡು ಜಿ ಪಿ ನಂ 235 ನ್ನು 13 ನೇ ಪ್ರತಿವಾದಿ ಪಾಲಿಗೆ ಮತ್ತು 236 ನ್ನು 14 ನೇ ಪ್ರತಿವಾದಿ ಪಾಲಿಗೆ ಬರುವಂತೆ ಹಂಚಿಕೊಂಡರು ಅಂದರೆ ನನಗೆ ಗೊತ್ತಿಲ್ಲ. 13 ನೇ ಪ್ರತಿವಾದಿ ಮತ್ತು 14 ನೇ ಪ್ರತಿವಾದಿ ವರದಿ ಕೂಟ್ಟ ನಂತರ ಗ್ರಾಮ ಪಂಚಾಯತ ಠರಾವ ಮಾಡಿ, ಸದರಿ ರವರ ಹೆಸರು ದಾಖಲು ಮಾಡಿದ್ದಾರೆ ಅಂದರೆ ಗೊತಿಲ್ಲ . 13 ಮತ್ತು 14 ನೇ ಪ್ರತಿವಾದಿ ಜಿ ಪಿ ನಂ 235 ಮತ್ತು 236 ಕ್ಕೆ ತಮ್ಮ ಹೆಸರುಗಳನ್ನು ಹಚ್ಚಿ ಕೂಂಡಿದ್ದರೂ ಸಹ ಗೊತಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

3. 13 ನೇ ಪ್ರತಿವಾದಿ 2003 ರಲ್ಲಿ ಜಿ ಪಿ ನಂ 235 ನ್ನು ಒತ್ತಿ ಇಟ್ಟು ಬ್ಯಾಂಕಿನಿಂದ ಸಾಲ ಪಡೆದಿದ್ದಾರೆ ಅಂದರೆ ಗೂತ್ತಿಲ್ಲ. ಸಾಲ ಮಾಡಿ , 2003 ರಲ್ಲಿ ಸದರಿ ಆಸ್ತಿಯಲ್ಲಿ ಮನೆ ಕಟ್ಟಿದ್ದಾರೆ ಅಂದರೆ ಗೊತಿಲ್ಲ . ಪಂಚಾಯತಿಯಿಂದ ಕಟ್ಟಡ ಪರವಾನಿಗೆ ಪಡೆದುಕೊಂಡು ಕಟ್ಟಡ ಕಟ್ಟಿದ್ದಾರೆ ಅಂದರೆ ಗೂತ್ತಿಲ್ಲ . ಸದರಿ ಮನೆಗೆ ಗ್ರಾಮ ಪಚಾಯತಿ ರವರು ನಲಿ ನೀರಿನ ವ್ಯವಸೆ ಮತ್ತು ವಿದುತ ಪೂರೈಸಿದ್ದಾರೆ ಅಂದರೆ ಸರಿಯಲ್ಲ . ಪಂಚಾಯತಿ ಠರಾವನ್ನು ಕೂಡಾ 2003 ರಿಂದ 13 ನೇ ಪ್ರತಿವಾದಿ ತುಂಬಿಕೂಂಡು ಬಂದಿದ್ದಾರೆ ಅಂದರೆ ಸರಿಯಲ್ಲ. 13 ನೇ ಪ್ರತಿವಾದಿ ರವರು ಮನೆ ಕಟ್ಟಿದ್ದ ನ್ನು ಮತ್ತು ಜಿ ಪಿನಂ 235 ರಲ್ಲಿ ವಾಸಿಸುತ್ತಿದ್ದನ್ನು ನನಗೆ ವಯಸ್ಕನಾದಗಿನಿಂದ ಗೂತ್ತಿತ್ತು ಅಂದರೆ ಸರಿಯಲ್ಲ. ಸದರಿ ವಿಷ್ಷಯ ಗೊತಿದ್ದರೂ ಸಹ

ಗೊತ್ತಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

4. 14 ನೇ ಪ್ರತಿವಾದಿ ರವರು ಖರೀದಿಸಿದ ಜಿ ಪಿ ನಂ 236 ರಲ್ಲಿ 1989 ರಲ್ಲಿ ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆ ಪಡೆದಕೂಂಡಿದ್ದಾರೆ ಅಂದರೆ ಸರಿಯಲ್ಲ . ಬ್ಯಾಂಕಿನಿಂದ ಸಾಲ ಪಡೆದಿದುಕೂಂಡಿದ್ದರೂ ಸಹ ಮನೆಯನ್ನು ಸಂಪೂರ್ಣ ಕಟ್ಟಲು ಅವರಿಗೆ ಸಾಧ್ಯವಾಗಿಲ್ಲ ಅಂದರೆ ಸರಿಯಲ್ಲ . ಇಂದಿಗೂ ಸಹ ಜಿ ಪಿ ನಂ 236 ನ್ನು ಸಹ 14 ನೇ ಪ್ರತಿವಾದಿ ಪ್ರತ್ಯಕ್ಷ ಕಬಜಾದಲ್ಲಿ ಇಟ್ಟುಕೊಂಡು ಕರ ಪಾವತಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ದಾವಾದ ದಾಖಲಿಸುವ ಪೂರ್ವದಲ್ಲಿ ನಮ್ಮ ಮನತೆನದ ಎಲ್ಲ ಆಸ್ತಿ ಗಳ ಪಹಣಿ ಮತ್ತು ಉತಾರೆಗಳನ್ನು ನಾನು ತೆಗೆಯಿಸಿ ನೋಡಿದ್ದೇನೆ ಅಂದರೆ ಸರಿ . ನಾನು 2014 ರಲ್ಲಿ ಪ್ರಕರಣ ದಾಖಲು ಮಾಡಿದೇನೆ ಅಂದರೆ ಸರಿ . 2014 ಸಾಲಿನ ಉತಾರೆಯಲ್ಲಿ 14 ನೇ ಪ್ರತಿವಾದಿಯ ಹೆಸರು ದಾಖಲಾಗಿದೆ . ಸದರಿ ರವರ ಹೆಸರು ಯಾವ ನಾತೆಯಿಂದ ದಾಖಲಾಗಿದೆ ಅಂತಾ ನಾನು ಪರೀಶಿಲನೆ ಮಾಡಿಲ್ಲ. . ಜಿ ಪಿ ನಂ 235 ಮುತ್ತ 236 ನ್ನು ಮಾರಾಟ ಮಾಡಿದ ವಿಷಯ ನನ್ನ ತಾಯಿಂದ ನಮಗೆ , ನನ್ನ ಕುಟುಂಬದವರಿಗೆ ಗೊತ್ತಾಗಿದೆ ಅಂದರೆ ಸರಿಯಲ್ಲ . ಖರೀದಿ ಮಾಡಿದ 26 ವರ್ಷಗಳ ನಂತರ ಖೂಟ್ಟಿ ರೀತಿಯಿಂದ ಆಸ್ತಿ ಕಬಳಿಸಲು ಖೂಟ್ಟದಾವೆ ಮಾಡಿದ್ದೇನೆ ಅಂದರೆ ಸರಿಯಲ್ಲ . ನಾನು ವಯಸ್ಕನಾದಾಗಿನಿಂದ ನಾನು 2014 ರವರೆಗೆ 13 ಮತ್ತು 14 ನೇ ಪ್ರತಿವಾದಿ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಅಂದರೆ ಸರಿ . ಜಿ ಪಿ ನಂ 235 ಮತ್ತು 236 ರಲ್ಲಿ 13

ಮತ್ತು 14 ನೇ ಪ್ರತಿವಾದಿ ಹೆಸರು ಪಂಚಾಯತಿ ಉತಾರೆಗಳಲ್ಲಿ ದಾಖಲಾದ ಬಗ್ಗೆ ನಾನು ಪ್ರಶ್ನೆ ಮಾಡಿಲ್ಲ.

5. 13 ಮತ್ತು 14 ನೇ ಪ್ರತಿವಾದಿ ರವರು ಅನಧಿಕೃತವಾಗಿ ಜಿ ಪಿ ನಂ 235 ಮತ್ತು 236 ರಲ್ಲಿ ಹೆಸರು ದಾಖಲಾದ ಬಗ್ಗೆ ನಾನು 2015 ರಲ್ಲಿ ಪಂಚಾಯತಿಗೆ ಅರ್ಜ ಕೊಟ್ಟಿದೇನೆ ಸದರಿ ಅರ್ಜಿಗೆ ಪಂಚಾಯತಿ ರವರು ಉತ್ತರ ನೀಡಿಲ್ಲ . ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ . ನಾನು ಯಾವುದೇ ಅರ್ಜಿಯ ಪ್ರತಿ ಹಾಜರು ಮಾಡಿಲ್ಲದಿದ್ದರೂ ಸಹ ಮಾಡಿದ್ದನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . 13 ಮತ್ತು 14 ನೇ ಪ್ರತಿವಾದಿಗೆ ನನ್ನ ತಂದೆ ಜಿ ಪಿ ನಂ 235 ಮತ್ತು 236 ಮಾರಾಟ ಮಾಡಿ, ಅದರಿಂದ ಬಂದ ಹಣದಿಂದ ಕುಟುಂಬದ ವ್ಯವಹರಣೆಯನ್ನು ಹಣದ ಅಚಣೆಯನ್ನು ನಿಗಿಸಿಕೂಂಡಿದ್ದಾರೆ ಅಂದರೆ ಸರಿಯಲ್ಲ . ಖರೀದಿ ಹಣವನ್ನು ಕುಟುಂಬದ ಅವಶ್ಯಕತೆ ಇದ್ದ ಕಾರಣ , ವಿನಿಮಯ ಮಾಡಿಕೊಂಡಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದನೆ ಅಂದರೆ ಸರಿಯಲ್ಲ. ಸದರಿ ದಾವೆಯಲ್ಲಿ 13 ಮತ್ತು 14 ನೇ ಪ್ರತಿವಾದಿ ವಿರುದ್ದ ನನ್ನ ಮಾಗಣಿ ಇರುವುದಿಲ್ಲ. 1988 ರಿಂದ ಇಲಿವರೆಗೂ ಇಬ್ಬರು13 ಮತ್ತು 14 ನೇ ಪ್ರತಿವಾದಿಯರು ವಾಸಮಾಡುತ್ತಿದ್ದು , ಸಂಪೂರ್ಣ ಮಾಲೀಕರು ಅವರೇ ಇದ್ದಾರೆ ಅಂದರೆ ಸರಿಯಲ್ಲ . 1 ರಿಂದ 12 ನೇ ಪ್ರತಿವಾದಿಯರಿಗೆ ಜಿ ಪಿ ನಂ 235 ಮತ್ತು 236 ರಲ್ಲಿ ಯಾವುದೇ ಹಕು ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಕೇಸನ್ನು ದಾಖಲು ಮಾಡಿದೇನೆ ಅಂದರೆ ಸರಿಯಲ್ಲ.

6. ನನ್ನ ತಂದೆ ಅವಿದಾವಂತರು . ನನ್ನ ತಂದೆ ಕಿತ್ತೂರಲ್ಲಿ 7 ನೇ ತರಗತಿವೆರೆಗೆ ಓದಿದ್ದರೂ ಅಂದರೆ ಸರಿಯಲ್ಲ. ಅವರಿಗೆ ಅಕ್ಷರ ಜ್ಞಾನ ಇತ್ತು , ಓದಲು , ಬರೆಯಲು ಬರುತ್ತಿತು ಅಂದರೆ ಸರಿಯಲ್ಲ. ನನ್ನ ತಂದೆ ಎಲ್ಲಿಯೂ ಹೆಬ್ಬಟ್ಟಿನ ಗುರುತು ಮಾಡುತ್ತಿರಲಿಲ್ಲ ಸಹಿ ಮಾಡುತಿದ್ದರು ಅಂದರೆ ಸರಿಯಲ್ಲ . ನನ್ನ ತಂದೆ ಧಾರವಾಡದಲ್ಲಿ ಟ್ರಕ ಚಾಲಕ ಅಂತಾ ಕೆಲಸ ಮಾಡುತಿದರು . ಅವರಿಗೆ ಡಿ ಎಲ ಕೂಡಾ ಇತ್ತು . ನಮ್ಮ ತಂದೆ ಹೆಬ್ಬಟ್ಟಿನ ಸಹಿ ಮಾಡುತಿದರು ಅಂತಾ ತೋರಿಸಲು ದಾಖಲೆ ಹಾಜರು ಮಾಡಿಲ್ಲ ಅಂದರೆ ಸರಿ . 1986 ರಲ್ಲಿ ನಮ್ಮ ತಂದೆ ನನ್ನ ಕಾಕಾ ರವರ ಜೊತೆಗೆ ಕುಟುಂಬ ವ್ಯವಸ್ಥೆ ಮಾಡಿಕೂಂಡಿದ್ದರೂ ಸಹ , ಈಗ ಆಸ್ತಿ ಕಬಳಿಸಲು ಕುಟುಂಬ ವ್ಯವಸ್ಥೆ ಅಗಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ನಮ್ಮ ತಂದೆ ಶಾಲೆ ಕಲಿತ್ತಿದ್ದರೂ ಸಹ , ಖರೀದಿ ಪತ್ರದಲ್ಲಿ ಅವರ ಸಹಿ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲುಃ ವಕೀಲರ ವಿನಂತಿ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
SAK ಬೈಲಹೊಂಗಲ